**ಸಾಕ್ಷಿಯನ್ನು ದಿನಾಂಕ 09.09.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎ.ಎನ್.ಎಸ್ ವಕೀಲರಿಂದಃ**

11.ಈ ದಾವೆಯನ್ನು ಯಾವ ಕಾರಣಕ್ಕೆ ದಾಖಲಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಒತ್ತುವರಿಯಾಗಿರುವ ನನ್ನ ಜಾಗವನ್ನು ಬಿಡಿಸಿಕೊಡಲು ಈ ದಾವೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಯಾವ ಆಸ್ತಿ ಒತ್ತುವರಿಯಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ದಾವಾ ಷೆಡ್ಯೂಲ್ ಬಿ ಸ್ವತ್ತು ಒತ್ತುವರಿಯಾಗಿದೆ ಎನ್ನುತ್ತಾರೆ. ಒತ್ತುವರಿಯಾಗಿದೆ ಎಂದು ನಾನು ಹೇಳುತ್ತಿರುವ ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ನಾನೇ ಸ್ವಾಧೀನದಲ್ಲಿ ಇದ್ದೇನೆ ಆದರೆ ಪ್ರತಿವಾದಿಯರ ಹೆಸರಿಗೆ ಸದರಿ ಜಾಗದ ದಾಖಲೆ ಇದೆ ಎನ್ನುತ್ತಾರೆ. ದಾವಾ ಬಿ ಷೆಡ್ಯೂಲ್ ಸ್ವತ್ತಿನ ದಾಖಲೆಗಳು ಪ್ರತಿವಾದಿಯರ ಹೆಸರಿಗೆ ಇದೆ ಮತ್ತು ಅದನ್ನು ಅವರು ಒತ್ತುವರಿ ಮಾಡಿದ್ದಾರೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿದ್ದೇನೆ. ದಾವಾ ಬಿ ಷೆಡ್ಯೂಲ್ ಸ್ವತ್ತಿನ ದಾಖಲೆಗಳ ಸಲುವಾಗಿ ನನ್ನ ದಾವೆಯಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ.

12. ನನ್ನ ವಾದ ಪತ್ರದಲ್ಲಿ ದಾವಾ ಬಿ ಷೆಡ್ಯೂಲ್ ಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಗಿರಿಯಪ್ಪನ ಸ್ವತ್ತು ಮತ್ತು ದಕ್ಷಿಣಕ್ಕೆ ಮೈಲಾರಪ್ಪನ ಸ್ವತ್ತು ಇದೆ ಎಂದು ಬರೆಸಿದ್ದೇನೆ.

13. ಪ್ರತಿವಾದಿಯರ ಮನೆ ನನ್ನ ಮನೆಯ ಎಡಭಾಗಕ್ಕೆ ಇದೆ ಎಂದರೆ ಸರಿ. ಪ್ರತಿವಾದಿಯರ ಮನೆಗೆ ಸಂಬಂಧಪಟ್ಟ ಇ ಸ್ವತ್ತು ದಾಖಲೆ ನಂಜಯ್ಯ ರವರ ಹೆಸರಿಗೆ ಇದೆ ಎಂದರೆ ಸಾಕ್ಷಿ ಮೂಲ ಮಾಲಿಕರ ದಾಖಲೆಗಳನ್ನು ತಿದ್ದುಪಡಿ ಮಾಡಿ ನಂಜಯ್ಯನ ಹೆಸರಿಗೆ ಪ್ರತಿವಾದಿಯರು ನಕಲಿ ದಾಖಲೆ ಸೃಷ್ಟಿಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಯಾವ ಆಧಾರದಲ್ಲಿ ಪ್ರತಿವಾದಿಯರು ಅವರ ಮನೆಯ ದಾಖಲೆಗಳನ್ನು ನಂಜಯ್ಯನ ಹೆಸರಿಗೆ ಸೃಷ್ಟಿಮಾಡಿದ್ದಾರೆ ಎಂದು ಹೇಳುತ್ತಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಗಳನ್ನು ಸೃಷ್ಟಿಮಾಡಿದ್ದಾರೆ ಎಂದು ಪ್ರತಿವಾದಿಯರ ವಿರುದ್ಧ ಮೂಲ ಮಾಲಿಕರಾದ ವಿಜಯಮ್ಮ ಎಂಬುವವರು ದಾವೆ ಹಾಕಿದ್ದಾರೆ ಮತ್ತು ಆ ಆಧಾರದಲ್ಲಿ ನಾನು ಹೇಳುತ್ತಿದ್ದೇನೆ ಎನ್ನುತ್ತಾರೆ. ವಿಜಯಮ್ಮ ದಾಖಲಿಸಿರುವ ದಾವೆಯ ನಂಬರ್ ನನಗೆ ಗೊತ್ತಿಲ್ಲ. ಸದರಿ ವಿಜಯಮ್ಮರವರನ್ನು ಈ ದಾವೆಗೆ ಪಕ್ಷಗಾರರಾಗಿ ಸೇರಿಸಿಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಅವರು ತಮ್ಮ ಜಾಗದ ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

14. ಈಗ ನನಗೆ ತೋರಿಸಲಾದ ಇ ಸ್ವತ್ತು ದಾಖಲೆಯೇ ಪ್ರತಿವಾದಿಯರ ಜಾಗಕ್ಕೆ ಸಂಬಂಧಿಸಿದ್ದು ಅದು ನಂಜಯ್ಯನ ಹೆಸರಿಗೆ ಇದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು **<u>ನಿಡಿ-7</u>** ಎಂದು ಗುರುತಿಸಲಾಯಿತು. ಸಾಕ್ಷಿ ಪುನಃ ನಿಡಿ-7 ರ

ದಾಖಲೆಯನ್ನು ಪ್ರತಿವಾದಿಯರು ಸೃಷ್ಟಿಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯರು ಈಗ ವಾಸವಿರುವ ಮನೆಯ ಹಿಂಭಾಗದ ಜಾಗ ನಂಜಯ್ಯನಿಗೆ ಮಂಜೂರಾಗಿತ್ತು ಮತ್ತು ನಂಜಯ್ಯನ ಮರಣದ ನಂತರ ಪ್ರತಿವಾದಿಯರು ಪಾಲು–ಪಾರಿಕತ್ತಿನ ಮೂಲಕ 4 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿಯರ ಮನೆಯ ಮುಂಭಾಗದ ಜಾಗ ವಿಜಿಯಮ್ಮಳಿಗೆ ಸೇರಿದೆ ಮತ್ತು ಅವರ ಮನೆಯ ಹಿಂಭಾಗದ ಜಾಗ ನನಗೆ ಸೇರಿದೆ ಹಾಗೂ ಸದರಿ ಜಾಗದ ದಾಖಲೆಗಳನ್ನು ಪ್ರತಿವಾದಿಯರು ಸೃಷ್ಟಿಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಈಗ ನನಗೆ ತೋರಿಸಲಾದ ದಾಖಲೆಯೇ 4 ನೇ ಪ್ರತಿವಾದಿಗೆ ಖಾಲಿ ಜಾಗ ಕೊಡಲಾಗಿರುವ ಪಾಲು ವಿಭಾಗ ಪತ್ರದ ದಾಖಲೆ ಎನ್ನುವುದು ನನಗೆ ಗೊತ್ತಿಲ್ಲ. ಪಾಲು ವಿಭಾಗದ ಮೂಲಕ 4 ನೇ ಪ್ರತಿವಾದಿ ಪಾಲಿಗೆ ಬಂದ ಜಾಗದಲ್ಲಿ ಆತ ಮನೆ ಕಟ್ಟಲು ಹೋದಾಗ ನಾನು ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

15. ನಮ್ಮ ಮನೆಯ ಹಿಂಭಾಗದಲ್ಲಿ ತೆಂಗಿನ ಮರ ಮತ್ತು ಮಾವಿನ ಮರಗಳು ಬೆಳೆದಿರುವ ಖಾಲಿ ಜಾಗದಲ್ಲಿ ನಾನು ಅಕ್ರಮ ಸ್ವಾಧೀನ ಹೊಂದಿದ್ದೇನೆ ಎಂದರೆ ಸರಿಯಲ್ಲ. ಸದರಿ ಖಾಲಿ ಜಾಗದಲ್ಲಿರುವ ಮರಗಳಿಂದ 4 ನೇ ಪ್ರತಿವಾದಿ ತಮ್ಮ ಜಾಗದಲ್ಲಿ ಮನೆ ಕಟ್ಟಲು ತೊಂದರೆಯಾದಾಗ ಮರ ತೆರವುಗೊಳಿಸಲು ಪ್ರಯತ್ನ ಪಟ್ಟರು ಮತ್ತು ಆಗ ನಾನು ಅವರಿಗೆ ತೊಂದರೆ ಕೊಟ್ಟಿದ್ದರಿಂದ ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 197/20 ರಂತೆ ದಾವೆ ದಾಖಲಿಸಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುತ್ತಿರುವ

ಮರಗಳನ್ನು ತೆರವುಗೊಳಿಸುವಂತೆ ನಗರ ಸಭೆಯವರು ಈಗ ನನಗೆ ತೋರಿಸಲಾದಂತೆ ನೋಟಿಸು ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ **ನಿಡಿ-8** ಎಂದು ಗುರುತಿಸಲಾಯಿತು. ಸದರಿ ನೋಟಿಸಿಗೆ ಉತ್ತರ ಕೊಟ್ಟಿದ್ದೇನೆ ಎನ್ನುತ್ತಾರೆ. ನಿಡಿ-8 ರಂತೆ ನೋಟಿಸು ಕೊಟ್ಟ ನಂತರ ನನ್ನ ಜಾಗದಲ್ಲಿರುವ ಮರಗಳನ್ನು ತೆರವುಗೊಳಿಸುವಂತೆ ನಗರ ಸಭೆಯವರು ಆದೇಶಿಸಿದ್ದರು ಎಂದರೆ ಸರಿ. ಈಗ ನನಗೆ ತೋರಿಸಲಾದ ದಾಖಲೆಯೇ ಸದರಿ ಆದೇಶ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ದಾಖಲೆಯನ್ನು **ನಿಡಿ-9** ಎಂದು ಗುರುತಿಸಲಾಯಿತು. ಸಾಕ್ಷಿ ಸ್ವ ಇಚ್ಚೆಯಿಂದ ಪ್ರತಿವಾದಿಯರು ಸುಳ್ಳು ಮಾಹಿತಿ ಕೊಟ್ಟು ನಿಡಿ-9 ರಂತೆ ಆದೇಶ ಪಡೆದಿದ್ದಾರೆ ಎನ್ನುತ್ತಾರೆ. ನಿಡಿ-9 ರ ಆದೇಶದ ಹೊರತಾಗಿಯೂ ನಾನು ದಿನಾಂಕ 28.06.2020 ರಂದು ಮರಗಳನ್ನು ತೆರವುಗೊಳಿಸದೆ ತೊಂದರೆ ಕೊಟ್ಟ ಕಾರಣ ಪ್ರತಿವಾದಿಯರು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 197/2020 ರಂತೆ ದಾವೆ ದಾಖಲಿಸಿದರು ಎಂದರೆ ಸರಿಯಲ್ಲ.

16. ನಿ.ಪಿ.-15 ರಂತೆ ನಾನು ಹಾಜರುಪಡಿಸಿರುವ ದಾಖಲೆಯ ಲಭ್ಯತ್ತೆ ಬಗ್ಗೆ ನಗರ ಸಭೆಗೆ ಪ್ರತಿವಾದಿಯರು ಮಾಹಿತಿ ಹಕ್ಕು ಕಾಯ್ದೆ ಯಡಿ ಅರ್ಜಿ ಸಲ್ಲಿಸಿದ್ದಾರೆ ಮತ್ತು ಆಗ ನಗರ ಸಭೆಯವರು ಆ ರೀತಿ ದಾಖಲೆ ಲಭ್ಯವಿಲ್ಲ ಎಂದು ಈಗ ನನಗೆ ತೋರಿಸಲಾದಂತೆ ಹಿಂಬರಹ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ತಪ್ಪು ಹಿಂಬರಹ ಕೊಟ್ಟಿದ್ದಾರೆ ಎನ್ನುತ್ತಾರೆ.

17. ಪ್ರತಿವಾದಿಯರಿಗೆ ನಾನೇ ತೊಂದರೆ ಕೊಟ್ಟು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ

ಸರಿಯಲ್ಲ. ಈ ದಾವೆಯಲ್ಲಿ ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಮಾಡಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**